**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ ಹುಣಸೂರು**

ದಿನಾಂಕಃ 09ನೇ ಜುಲೈ ತಿಂಗಳು 2025ರಂದು

**ಸಿಸಿ ನಂ.228/2023**

**ಫಿರ್ಯಾದುದಾರರುಃ** ಪಾಂಡುರಂಗರಾವ್ ಹೆಚ್,
ಬಿನ್ ಲೇಟ್ ಹನುಮಂತರಾವ್,
50 ವರ್ಷ, ವಾಸಃ ನಂ.460, ದೊಡ್ಡಮಸೀದಿ
ಬೀದಿ, ಹುಣಸೂರು ಟೌನ್.

**– ವಿರುದ್ಧ –**

**ಆರೋಪಿಃ** ಲಕ್ಷ್ಮಣ, ಬಿನ್ ಲೇಟ್ ವೆಂಕಟೇಗೌಡ,
58 ವರ್ಷ, ವಾಸಃ ಕಟ್ಟೆಮಳಲವಾಡಿ ಗ್ರಾಮ ಮತ್ತು
ಅಂಚೆ, ಕೆ.ಆರ,ನಗರ ರಸ್ತೆ, ಐಒಬಿ ಬ್ಯಾಂಕ್ ಹತ್ತಿರ,
ಹುಣಸೂರು ತಾಲ್ಲೂಕು

**ದಂಡ ಪ್ರಕ್ರಿಯಾ ಸಂಹಿತೆಯ ಕಲಂ 251ರ ಅಡಿಯಲ್ಲಿ ಆರೋಪಣಾ ಸಾರಾಂಶ**

ಆರೋಪಿಯಾದ ನೀವು ಮತ್ತು ಫಿರ್ಯಾದಿದಾರರಾದ ಪಾಂಡುರಂಗರಾವ್ ಹೆಚ್ ರವರು ಹಲವಾರು ವರ್ಷಗಳಿಂದ ಪರಿಚಿತರಾಗಿದ್ದು, ನಿಮ್ಮ ಕಾನೂನುಬದ್ಧ ಅವಶ್ಯಕತೆಗಾಗಿ ಅಂದರೆ ನಿಮ್ಮ ಕೈಸಾಲಗಳನ್ನು ತೀರಿಸಲು, ವ್ಯಾಪಾರದ ಅಗತ್ಯಕ್ಕಾಗಿ ಮತ್ತು ಗೃಹಕೃತ್ಯದ ಖರ್ಚಿಗಾಗಿ 2022ರ ಅಕ್ಟೋಬರ್ ತಿಂಗಳಿನ ಮೊದಲ ವಾರದಲ್ಲಿ ನೀವು ಅವರಿಂದ ರೂ.4,00,000/- ಗಳನ್ನು ಮೂರು ತಿಂಗಳ ಒಳಗೆ ಮರುಪಾವತಿಸುವುದಾಗಿ ಹೇಳಿ ಸಾಲವಾಗಿ ಪಡೆದುಕೊಂಡಿದ್ದು, ಸದರಿ ಸಾಲದ ಮರುಪಾವತಿಗಾಗಿ ನೀವು 02.03.2023 ರ ದಿನಾಂಕ ನಮೂದಿಸಿ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು, ಎಸ್ ಜೆ. ರಸ್ತೆ ಹುಣಸೂರು ಶಾಖೆಯ ಚೆಕ್ ಸಂಖ್ಯೆ 394951 ಅನ್ನು ರೂ.4,00,000/-

ಗಳಿಗೆ ಫಿರ್ಯಾದಿದಾರರಿಗೆ ನೀಡಿದ್ದು, ಅದನ್ನು ಫಿರ್ಯಾದಿದಾರರು ತಮ್ಮ ಖಾತೆ ಹೊಂದಿದ ಇಂಡಿಯನ್ ಓವರ್ ಸೀಸ್ ಬ್ಯಾಂಕ್, ಹುಣಸೂರು ಶಾಖೆಯ ಮೂಲಕ ನಗದೀಕರಣಕ್ಕಾಗಿ ಹಾಜರುಪಡಿಸಿದಾಗ "ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲ" ಎಂಬ ಕಾರಣಕ್ಕಾಗಿ ಸದರಿ ಚೆಕ್ ಅಮಾನ್ಯಗೊಂಡು ದಿನಾಂಕ 21.03.2023 ರಂದು ಬ್ಯಾಂಕಿನ ಹಿಂಬರಹದೊಂದಿಗೆ ವಾಪಾಸಾಗಿದ್ದು, ಈ ಬಗ್ಗೆ ಫಿರ್ಯಾದಿದಾರರು ದಿನಾಂಕ 03.10.2023ರಂದು ತಮ್ಮ ವಕೀಲರ ಮೂಲಕ ನೋಂದಾಯಿತ ಅಂಚೆಯಲ್ಲಿ ನೋಟೀಸನ್ನು ನೀಡಿದ್ದು, ಸದರಿ ನೋಟೀಸು ದಿನಾಂಕ 27.03.2023 ರಂದು ನಿಮಗೆ ಖುದ್ದಾಗಿ ಜಾರಿಯಾಗಿದ್ದರೂ ಸಹ ನೀವು ಚೆಕ್‌ನಲ್ಲಿ ನಮೂದಿಸಿದ ಹಣವನ್ನು ನೀಡದೆ ಇರುವುದರಿಂದ ನೀವು ನೆಗೋಷಿಯೆಬಲ್ ಇನ್‌ಸ್ಟ್ರುಮೆಂಟ್ಸ್ ಕಾಯ್ದೆಯ ಕಲಂ 138ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತೀರೆಂದು ನಿಮ್ಮ ಮೇಲೆ ಆರೋಪಣೆ ಇರುತ್ತದೆ.

| | |
|---|---|
| ಪ್ರಶ್ನೆ:1 | ನಿಮಗೆ ತಿಳಿದಿರುವ ಭಾಷೆಯಲ್ಲಿ ಓದಿ ವಿವರಿಸಲಾದ ಆರೋಪಣೆಯನ್ನು ನೀವು ಕೇಳಿ ತಿಳಿದುಕೊಂಡಿರುವಿರಾ? |
| ಉತ್ತರಃ | ತಿಳಿಯಿತು |
| ಪ್ರಶ್ನೆ: 2 | ನೀವು ಮೇಲಿನ ಆಪಾದನೆಯನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆ ಆಗಬೇಕೆಂದು ಬಯಸುವಿರಾ? |
| ಉತ್ತರಃ | ತಪ್ಪು ಮಾಡಿಲ್ಲ, ವಿಚಾರಣೆಯಾಗಬೇಕು. |

ಮೇಲ್ಕಾಣಿಸಿದ ಆಪಾದನೆಯನ್ನು ಆರೋಪಿಗೆ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ಯಥಾವತ್ತಾಗಿ ದಾಖಲಿಸಲಾಗಿದೆ ಎಂದು ಈ ಮೂಲಕ ದೃಢೀಕರಿಸಲಾಗಿದೆ.

ANITHA Digitally signed by ANITHA Date: 2025.07.09 17:46:52 +0530

(ಅನಿತ)

**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು**

**ಮತ್ತು ಪ್ರ.ದ.ನ್ಯಾದಂ., ಹುಣಸೂರು.**

ಆರೋಪಿಯ ಸಹಿಃ